

**ಬೆಂಗಳೂರಿನ 'ಇನ್‌ಫೋಸಿಸ್' ಸಂಸ್ಥೆಯ 'ಉನ್ಮೀಲನ' ಸಾಂಸ್ಕೃತಿಕ ಸಂಘ ಏರ್ಪಡಿಸಿದ್ದ ಚರ್ಚೆಯಲ್ಲಿ ಲೇಖಕ ರಾಮಚಂದ್ರ ಗುಹಾ, ಸಾಹಿತಿ ಜಾವೆದ್ ಅಖ್ತರ್, ರೋಹಿಣಿ ನಿಲೇಕಣಿ ಹಾಗೂ ವೀರ್‌ಸಾಂಘ್ವಿ ಭಾಗವಹಿಸಿದ್ದರು.**

B3-15

# ಉತ್ತರ-ದಕ್ಷಿಣ ಹತ್ತಿರ ಬಂದಾಗ...

ಬೆಂಗಳೂರು, ಜುಲೈ 29- ಯಾಂತ್ರಿಕ ಜೀವನಕ್ಕೆ ಸ್ವಲ್ಪ ವಿರಾಮ! ಯುವಜೀವಿಗಳಿಗೆ ಇಂದು ಚೇತೋಹಾರಿ ಸನ್ನಿವೇಶ. ಹಸಿರಿನ ಮೈದಾನದ ಮಧ್ಯಭಾಗದಲ್ಲಿ ಕಿಕ್ಕಿರಿದ್ದ ಸಾಫ್ಟ್‌ವೇರ್ ತಂತ್ರಜ್ಞರು. ವೇದಿಕೆಯ ಮೇಲೆ ವಿಭಿನ್ನ ಕ್ಷೇತ್ರಗಳ ದಿಗ್ಗಜರ ಸಮೂಹ ಚರ್ಚೆಗೆ ಸಿದ್ಧವಾಗಿತ್ತು.....

ಇದು ಖ್ಯಾತ ಇನ್‌ಫೋಸಿಸ್ ಸಂಸ್ಥೆಯ 'ಉನ್ಮೀಲನ' ಸಾಂಸ್ಕೃತಿಕ ಸಂಘ ಏರ್ಪಡಿಸಿದ್ದ, 'ಹೆಚ್ಚುತ್ತಿರುವ ಉತ್ತರ-ದಕ್ಷಿಣ ಭಾರತ ಪ್ರಾದೇಶಿಕ ಅಸಮಾನತೆ' ಕುರಿತ ಸಾಮೂಹಿಕ ಚರ್ಚೆಯ ಒಂದು ಚಿತ್ರಣ.

ದೂರದರ್ಶನದ ಖ್ಯಾತ ನಿರೂಪಕ ವೀರ್ ಸಾಂಘ್ವಿ ಸಾರಥ್ಯದಲ್ಲಿ ನಡೆದ ಈ ಚರ್ಚೆಯಲ್ಲಿ ಪ್ರಸಿದ್ಧ ಕವಿ, ಗೀತರಚನಕಾರ ಜಾವೇದ್ ಅಖ್ತರ್, ಶಿಕ್ಷಣ ತಜ್ಞೆ ಹಾಗೂ ಲೇಖಕಿ ದೇವಕಿ ಜೈನ್, ಹೆಸರಾಂತ ಅಂಕಣಕಾರ ರಾಮಚಂದ್ರ ಗುಹಾ ಹಾಗೂ 'ಪಯೋನೀರ್'ನ ಸಂಪಾದಕ ಚಂದನ್ ಮಿತ್ರಾ ಭಾಗವಹಿಸಿದ್ದರು.

ಚರ್ಚೆ ಪ್ರಾದೇಶಿಕ ಅಸಮಾನತೆಗೆ ಕಾರಣವಾದ ಸಂಸ್ಕೃತಿ, ಭಾಷೆ ಹಾಗೂ ರಾಜಕೀಯ ವಿಷಯಗಳನ್ನು ಆಧರಿಸಿತ್ತು.

ದೇವಕಿ ಅವರು ಚರ್ಚೆಯನ್ನು ಆರಂಭಿಸಿ, ಉತ್ತರ-ದಕ್ಷಿಣದ ಸಂಪ್ರದಾಯಗಳು ಬೇರೆಯಾಗಿದ್ದರೂ ಆಚರಣೆಯ ಮೂಲ ಉದ್ದೇಶ ಒಂದೇ. ಪ್ರಚಲಿತ ಹಬ್ಬಗಳ ಆಚರಣೆ, ಉಡುಗೆಗಳ ಅನುಕರಣೆಗಳಲ್ಲಿ ಏಕತೆ ಕಾಣುತ್ತಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಚಂದನ್ ಮಿಶ್ರಾ ಅವರು ಸಂಪರ್ಕ ಭಾಷೆಯ ಬಗ್ಗೆ ಮಾತನಾಡುತ್ತಾ ಹಿಂದಿ ಭಾಷೆಯು ಸಂಪರ್ಕ ಭಾಷೆಯಾಗಬೇಕು ಎಂದು ಅಭಿಪ್ರಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಾವೇದ್ ಅಖ್ತರ್, ಇಂಗ್ಲೀಷ್ ಭಾಷೆಯೇ ಸಂಪರ್ಕ ಭಾಷೆಯಾಗಬೇಕು. ಆದರೆ ಕೇವಲ ಒಂದು ಸಂಪರ್ಕ ಭಾಷೆಗಾಗಿ ಹಲವು ಪ್ರಾದೇಶಿಕ ಭಾಷೆಗಳ ನಿರ್ಲಕ್ಷ್ಯತೆ ಸಲ್ಲದು ಎಂದರು. ಅಖ್ತರ್ ಅವರ ಧ್ವನಿಗೆ ಸಭಿಕರಿಂದ ಒಕ್ಕೊರಲಿನ ಮನ್ನಣೆ ದೊರೆಯಿತು.

ಚರ್ಚೆಯು ರಾಜಕೀಯ ರಂಗಕ್ಕೆ ತಿರುವು ಪಡೆದಾಗ ಮಾತನಾಡಿದ ರಾಮಚಂದ್ರ ಗುಹಾ ಅವರು ದಕ್ಷಿಣ ಭಾರತದ ಮುಖ್ಯಮಂತ್ರಿಗಳಾದ ಎಸ್.ಎಮ್. ಕೃಷ್ಣ ಹಾಗೂ ಚಂದ್ರಬಾಬು ನಾಯ್ಡು ಇವರ ಆಡಳಿತ ವೈಖರಿಯನ್ನು ಉತ್ತರ ಭಾರತದ ರಾಜಕಾರಣಿಗಳು ಅನುಕರಿಸುವಂತಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.